ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "1997ರ ಕರ್ನಾಟಕ ವಿಧಾನ ಮಂಡಲದ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಮಂತ್ರಿಗಳ ಹೇಳಿಕೆ

ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆಗಳಲ್ಲಿ ಸರ್ಕಾರಿ ಭೂಮಿಯನ್ನು ಅಧಿಕಾರಿಗಳು ಆಕ್ರಮಿಸಿಕೊಂಡಿರುವ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆಗಳಲ್ಲಿ ಸರ್ಕಾರಿ ಭೂಮಿಯನ್ನು ಅಧಿಕಾರಿಗಳು ಅಕ್ರಮಿಸಿಕೊಂಡಿರುವ ಬಗ್ಗೆ ನಿನ್ನೆ ವಿಷಯವನ್ನು ಎತ್ತಿದೆ, ಅದಕ್ಕೆ ಮಾನ್ಯ ಕಂದಾಯ ಸಚಿವರು ಸ್ಟೇಟ್‌ಮೆಂಟ್ ಮಾಡಬೇಕು.

ಉಪಾಧ್ಯಕ್ಷರು : ಈಗ ಸ್ಟೇಟ್‌ಮೆಂಟ್ ಮಾಡುತ್ತಾರೆ.

+ಶ್ರೀ ರಮೇಶ್ ಸಿ ಜಿಗಜಿಣಗಿ (ಕಂದಾಯ ಸಚಿವರು) :

ಬೆಂಗಳೂರು ನಗರ ಜಿಲ್ಲೆ:

ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಅತ್ಯಂತ ಬೆಲೆ ಬಾಳುವ ಸರ್ಕಾರಿ ಭೂಮಿಗಳಾದ ಗೋಮಾಳ, ಹುಲ್ಲುಬನಿ, ಖರಾಬು, ಕೆರೆ ಅಂಗಳ, ಗುಂಡುತೋಪು, ಸ್ಮಶಾನ ಮುಂತಾದ ಭೂಮಿಗಳಿಗೆ ಕೆಲವು ಆಸಕ್ತಿಯ ಕೆಳಮಟ್ಟದ ಕಂದಾಯ ನೌಕರರ ಸಹಾಯದಿಂದ ಹಾಗೂ ಅಕ್ರಮ ದಾಖಲೆಗಳನ್ನು ಸೃಷ್ಟಿಸುವ ಮೂಲಕ ಸರ್ಕಾರದ ಭೂಮಿಗಳನ್ನು ಇಂತಹ ಬೋಗಸ್ ದಾಖಲೆಗಳ ಸಹಾಯದಿಂದ ನೋಂದಣಿ, ಜೆ.ಪಿ.ಎ. ಮುಖಾಂತರ ಅಕ್ರಮವಾಗಿ ಹೊಂದಿರುವುದನ್ನು ತಡೆಗಟ್ಟಲು ಹಾಗೂ ಇಂತಹ ಅಕ್ರಮ ದಾಖಲೆಗಳನ್ನು ಪತ್ತೆ ಹಚ್ಚಿ ಭೂಕಂದಾಯದ ಕಾಯ್ದೆ 1964ರ ಕಲಂ 136 (3) ರಡಿಯಲ್ಲಿ ಅಕ್ರಮ ದಾಖಲೆಗಳನ್ನು ರದ್ದುಪಡಿಸಿ ಸರ್ಕಾರದ ವಶಕ್ಕೆ ಪಡೆಯಲು ಒಂದು ಉಪ ವಿಭಾಗಾಧಿಕಾರಿಗಳ ಮಟ್ಟದ ಅಧಿಕಾರಿಗಳನ್ನೊಳಗೊಂಡ ಐದು ತನಿಖಾಧಿಕಾರಿಗಳ ತಂಡವನ್ನು ಪ್ರತಿ ತಾಲ್ಲೂಕುವಾರು ನೇಮಿಸಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿನ ಎಲ್ಲಾ ಸರ್ಕಾರಿ ಭೂಮಿಗಳನ್ನು ಖುದ್ದು ಸ್ಥಳ ತನಿಖೆ ಮಾಡಿ ಅಕ್ರಮ ದಾಖಲಾತಿಗಳನ್ನು ಪತ್ತೆ ಹಚ್ಚಲು ಹಾಗೂ ಸಂಬಂಧಿಸಿದ ಬೋಗಸ್ ದಾಖಲೆಗಳನ್ನು ಹೊಂದಿದ್ದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲು ಈ ತನಿಖಾ ತಂಡಕ್ಕೆ ಅಧಿಕಾರ ನೀಡಲಾಗಿರುತ್ತದೆ.

ಅದರಂತೆ ಈವರೆಗೆ ಒಟ್ಟು 103 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದು, 1997 ಜನವರಿ ಮಾಹೆಯ ಅಂತ್ಯದವರೆಗೆ ಸಾಧಿಸಿದ ಪ್ರಗತಿಯ ವಿವರ ಕೆಳಕಂಡಂತೆ ಇರುತ್ತದೆ.

		ಸಂಖ್ಯೆ	ವಿಸ್ತೀರ್ಣ
1)	ಜನವರಿ 1997ರ ಅಂತ್ಯದವರೆಗೆ ಸರ್ಕಾರಿ ಭೂಮಿಗಳಿಗೆ ಅಕ್ರಮ ದಾಖಲೆಗಳನ್ನು ಸೃಷ್ಟಿಸಿದ ಪ್ರಕರಣಗಳನ್ನು ಕಲಂ 136(3) ರಡಿ ದಾಖಲಿಸಿಕೊಂಡ ಒಟ್ಟು ಪ್ರಕರಣಗಳು.	103	ಎ - ಗ 1934-0(
2)	ಮಾಹೆಯ ಅಂತ್ಯದವರೆಗೆ ಅಂತಿಮ ಆದೇಶ ನೀಡಿ ಅನಧಿಕೃತ ದಾಖಲೆಗಳನ್ನು ರದ್ದುಪಡಿಸಲಾದ ಪ್ರಕರಣಗಳು.	54	1073-04
3)	ಕಲಂ 2ರಲ್ಲಿನ ಆದೇಶದ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳು	13	567-38
4)	ವಿಚಾರಣೆಗೆ ಬಾಕಿ ಇರುವ ಪ್ರಕರಣಗಳು	49	860-36

ಅಕ್ರಮ ದಾಖಲಾತಿಗಳನ್ನು ರದ್ದುಪಡಿಸಿ ಸರ್ಕಾರದ ವಶಕ್ಕೆ ಪಡೆಯಲಾದಂತಹ ಭೂಮಿಗಳ ಸುವ್ಯವಸ್ಥಿತವಾಗಿ ಕಾಪಾಡಲು ಮತ್ತು ಇಂತಹ ಅಕ್ರಮ ದಾಖಲೆಗಳನ್ನು ಸೃಷ್ಟಿಸಲು ಕಾರಣರಾ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ಶಿಸ್ತು ಕ್ರಮ ಪ್ರಾರಂಭಿಸಲು ಹಾಗೂ ಅಕ್ರಮ ದಾಖಲೆಗಳ ಹೊಂದಿದ್ದ ವ್ಯಕ್ತಿಗಳ ವಿರುದ್ಧ ಭಾರತದ ದಂಡ ಸಂಹಿತೆ ಕಲಂ 463, 465, 470 472ರಿಂದ 4 ಅಡಿಯಲ್ಲಿ ಸಂಬಂಧಿಸಿದ ಪೋಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲು ಉ ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರ್‌ರವರುಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ.

ಅಲ್ಲದೆ ಜಿಲ್ಲೆಯಲ್ಲಿರುವ ಎಲ್ಲಾ ಉಪ ನೊಂದಣಾಧಿಕಾರಿಗಳಿಗೆ ಈವರೆಗೆ ಪತ್ತೆ ಹಚ್ಚಲಾ ಇಂತಹ ಅಕ್ರಮ ದಾಖಲೆಗಳ ಆಧಾರದ ಮೇಲೆ ಯಾವುದೇ ನೋಂದಣಿ ಮಾಡಬಾರದೆಂದ ಹಾಗೂ ಈಗಾಗಲೇ ನೊಂದಣಿಯಾಗಿದ್ದಲ್ಲಿ ಅಂತಹ ನೋಂದಣಿ ಪತ್ರಗಳನ್ನು ರದ್ದುಪಡಿಸಲು ಜೀ ನೋಂದಣಾಧಿಕಾರಿಗಳಿಗೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಸಹ ನಿರ್ದೇಶನ ನೀಡಲಾಗಿರುತ್ತದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ:

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 1,04,476-03 ಎಕರೆ ವಿಸ್ತೀರ್ಣದಲ್ಲಿ 56,1 ಜನರು ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡಿರುತ್ತಾರೆ. ಇವರುಗಳ ಪೈಕಿ 2 467 ಜನರಿಗೆ 33593 ಎಕರೆ 37 ಗುಂಟೆ ವಿಸ್ತೀರ್ಣವನ್ನು ಜನವರಿ 1997ರವರೆಗೆ ಸಕ್ರಮಗೊಳಿಸಲಾಗಿದೆ. 22,538 ಜನರ ಅರ್ಜಿಗಳು ತಿರಸ್ಕೃತವಾಗಿದ್ದು ಇವರು ಅತಿಕ್ರಮಿಸಿದ್ದ 4 286-37 ಎಕರೆ ಜಮೀನಿನಿಂದ ಇತರರನ್ನು ಹೊರಹಾಕಲು ಕ್ರಮ ಕೈಗೊಳ್ಳಲಾಗಿದೆ. ಸಕ್ರಮೀಕರಣಕ್ಕಾ 8,185 ಅರ್ಜಿಗಳು ಬಾಕಿ ಉಳಿದಿದ್ದು 22,595 ಎಕರೆ 09 ಗುಂಟೆ ವಿಸ್ತೀರ್ಣವನ್ನು ಒ ಗೊಂಡಿರುತ್ತದೆ.

ಈ ಜಿಲ್ಲೆಯಲ್ಲಿ ಪಟ್ಟಣ ಪ್ರದೇಶಗಳಲ್ಲಿ 1365 ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸಲು ಅರ್ಜಿಗಳು ಬಂದಿರುತ್ತದೆ. ಅವುಗಳು ತೀವ್ರ ಪರಿಶೀಲನೆಯಲ್ಲಿವೆ.

ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿರುವ ಕಟ್ಟಡಗಳ ಸಮೀಕ್ಷೆ ನಡೆಸಲು ಕ್ರಮ ಕೈಗೊಳ್ಳಲಾಗಿದೆ. ಸುಮಾರು 8 ರಿಂದ 10 ಸಾವಿರ ಅನಧಿಕೃತ ಕಟ್ಟಡಗಳು ಸುಮಾರು 200 ರಿಂದ 250 ಎಕರೆ ಸರ್ಕಾರಿ ಜಮೀನಿನಲ್ಲಿ ಇರುತ್ತವೆ.

ಸರ್ಕಾರಿ ಜಮೀನುಗಳನ್ನು ರಕ್ಷಣೆ ಮಾಡಿಕೊಂಡು ಬರಲು ಎಲ್ಲಾ ತಹಶೀಲ್ದಾರರರುಗಳು ಮತ್ತು ಅಧೀನಾಧಿಕಾರಿಗಳಿಗೆ ಕಾಲಾವಕಾಶಕ್ಕೆ ನಿರ್ದೇಶನ ನೀಡಲಾಗಿದೆ. ಎಲ್ಲಾ ಸರ್ಕಾರಿ ಜಮೀನುಗಳನ್ನು ಗುರುತಿಸಿ ತಂತಿಬೇಲಿ ಹಾಕಿ, ಸರ್ಕಾರಿ ಜಮೀನು ಎಂದು ನಾಮಫಲಕ ಹಾಕುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದಂತೆ ಸರ್ಕಾರಿ ಭೂಮಿಯಲ್ಲಿ ಖಾಸಗಿ ವ್ಯಕ್ತಿಗಳಿಗೆ ಸ್ವಂತ ಜಮೀನು ಮಾಡಿಕೊಡುವ ಉದ್ದೇಶದಿಂದ ಅಧಿಕಾರಿಗಳು ಶಾಮೀಲಾಗಿ ಕಂದಾಯ ದಾಖಲೆಗಳನ್ನು ತಿದ್ದಿ ಬರೆದುಕೊಟ್ಟಿರುವ ಬಗ್ಗೆ ವಿವರ ಈ ಕೆಳಗಿನಂತೆ ಇರುತ್ತದೆ.

ಅ) ದೊಡ್ಡಬಳ್ಳಾಪುರ ತಾಲ್ಲೂಕು ಕಸಬಾ ಹೋಬಳಿ ಬಿಸವನಹಳ್ಳಿ ಗ್ರಾಮದ ಸ.ನಂ. 43, ಹಾಗೂ 45ರಲ್ಲಿ 8 ಎಕರೆ 28 ಗುಂಟೆ ಜಮೀನುಗಳನ್ನು ಹಾಗೂ ಹೊಸಹುಡ್ಯ ಗ್ರಾಮದ ಸರ್ವೆ ನಂ. 23, 26,29 ಹಾಗೂ 62 ರಲ್ಲಿ 41 ಎಕರೆ ಜಮೀನಿಗೆ ಬೋಗಸ್ ಸಾಗುವಳಿ ಚೀಟಿ ನೀಡಿ ಖಾತೆ ಮಾಡಲಾಗಿದೆ ಎಂದು ತಿಳಿದು ಬಂದಿದ್ದು ಆ ಮೇರೆಗೆ ಪರಿಶೀಲನೆ ಮಾಡಿ ಅಕ್ರಮವಾಗಿ ಮಾಡಿದ್ದ ದಾಖಲೆಗಳನ್ನು ತಹಶೀಲ್ದಾರ್ ರದ್ದುಪಡಿಸಿರುತ್ತಾರೆ. ಸಂಬಂಧಪಟ್ಟ ಗ್ರಾಮಲೆಕ್ಕಾಧಿಕಾರಿ ವಿರುದ್ಧ ಪ್ರಕರಣವು ಲೋಕಾಯುಕ್ತದಲ್ಲಿ ದಾಖಲಾಗಿರುತ್ತೆ.

ಆ) ರಾಮನಗರ ತಾಲ್ಲೂಕು ಕೂಟಗಲ ಹೋಬಳಿ ದೊಡ್ಡರಂಗವಾಡಿ ಸ.ನ. 53 ಮತ್ತು ವಿರೂಪಸಂದ್ರ ಸ.ನಂ.37ರ ಗೋಮಾಳದ ಸುಮಾರು 12 ಎಕರೆ ಜಮೀನು ಅಕ್ರಮವಾಗಿ ದಾಖಲೆ ಸೃಷ್ಟಿಸಿರುವ ಬಗ್ಗೆ ವರದಿಯಾಗಿದ್ದು ಗ್ರಾಮಲೆಕ್ಕಿದರ: ರಾಜಸ್ವ ನಿರೀಕ್ಷಕರ ವಿರುದ್ಧ ಇಲಾಖಾ ವಿಚಾರಣೆ ನಡೆಸಲಾಗುತ್ತಿದೆ ಮತ್ತು ಸರ್ಕಾರಿ ಜಮೀನನನ್ನು ರಕ್ಷಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಇ) ರಾಮನಗರ ತಾಲ್ಲೂಕು ಬಿಡದಿ ಹೋಬಳಿ ಶ್ಯಾನಮಂಗಲ, ಬಿಲ್ಲಕೆಂಪನಹಳ್ಳಿ ಮತ್ತು ಬಾಣಂದೂರು ಗ್ರಾಮಗಳಲ್ಲಿ ಅತಿಕ್ರಮ ಮಾಡಿದ್ದ 119ಎಕರೆ-28ಗುಂಟೆ ಜಮೀನಿನ ಪೈಕಿ 58ಎಕರೆ-00 ಗುಂಟೆ ಜಮೀನನ ಪೈಕಿ 58ಎಕರೆ-00 ಗುಂಟೆ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಬೇಕಾಗಿದೆ. ಕಟ್ಟಡ ವಗೈರೆ ಬಾರದಂತೆ ನೋಡಿಕೊಳ್ಳಲಾಗುತ್ತಿದೆ.

ಈ) ರಾಮನಗರ ತಾಲ್ಲೂಕು ಬಾಣಂದೂರು ಗ್ರಾಮದಲ್ಲಿ ಸುಮಾರು 4-00 ಎಕರೆ ಸರ್ಕಾರಿ ಹಳ್ಳವನ್ನು ಒತ್ತುವರಿ ಮಾಡಿ ಬೇಲಿ ಹಾಕಿದ್ದನ್ನು ತೆಗೆದುಹಾಕಲಾಗಿದೆ.

ಈ ಬಗ್ಗೆ ಕ್ರಮ ಸಂಖ್ಯೆ ಆರಡಿ. 20.ಎಲ್‌ಜಿಪಿ .95.ದಿ: 7.95 ರಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿ ಅದರಲ್ಲಿ ರಾಜ್ಯದಲ್ಲಿ ಬಹಳಷ್ಟು ಜನರು ಇತ್ತೀಚೆಗೆ ಸರ್ಕಾರಿ ಜಮೀನನ್ನು ಒತ್ತುವರಿ ಮಾಡುತ್ತಿರುವುದಾಗಿ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಸರ್ಕಾರಕ್ಕೆ ಬಂದಿರುತ್ತವೆ. ಈಗಾಗಲೇ ಇಂತಹ ಒತ್ತುವರಿ ಮಾಡಿರುವವರನ್ನು ಮತ್ತು ಮಾಡಲು ಯತ್ನಿಸುವವರನ್ನು ಒಕ್ಕಲೆಬ್ಬಿಸುವಂತೆ ಸಾಕಷ್ಟು ಸುತ್ತೋಲೆಗಳನ್ನು ಹೊರಡಿಸಲಾಗಿದೆ. ಆದರೂ ಇಂತಹ ಅಕ್ರಮ ಒತ್ತುವರಿ ನಡೆಯುತ್ತಿರುವುದು ವಿಷಾದನೀಯ. ಆದ್ದರಿಂದ ಇನ್ನು ಮುಂದೆ ಎಲ್ಲೆಲ್ಲಿ ಒತ್ತುವರಿ ಆಗಿದೆಯೋ ಅಲ್ಲಿ ಹೊಸದಾಗಿ ಆದ್ದರಿಂದ ಇನ್ನು ಮುಂದೆ ಎಲ್ಲೆಲ್ಲಿ ಒತ್ತುವರಿ ಆಗಿದೆಯೋ ಅಲ್ಲಿ ಹೊಸದಾಗಿ ಒತ್ತುವರಿಗಳಿಗೆ ಸ್ವತಃ ತಹಶೀಲ್ದಾರರು: ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಾಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಬೇಕೆಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ರಾಜ್ಯದಲ್ಲಿ ಭೂಕಬಳಿಕೆದಾರರು ಜೆ.ಪಿ.ಎ. ಮೂಲಕ ಜಮೀನುಗಳನ್ನು ವಶಪಡಿಸಿಕೊಂಡು ಅದನ್ನು ಮಾರುತ್ತಿರುವುದು ಮತ್ತು ಅದರಲ್ಲಿ ವ್ಯವಹಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಜೆ.ಪಿ.ಎ. ಮುಖಾಂತರ ಆದ ವ್ಯವಹಾರಗಳಿಗೆ ಖಾತೆ ಮಾಡಬಾರದೆಂದು ಸುತ್ತೋಲೆ ಸಂಖ್ಯೆ ಆರ್‌ಡಿ.124. ಟಿಆರ್‌ಎಂ.95(ಪಿ) ದಿನಾಂಕ 10-7-95 ರಂದು ಹೊರಡಿಸಲಾಗಿದೆ. ವ್ಯವಸಾಯ ಜಮೀನುಗಳನ್ನು ಫಾರಂ ನಂ.10 ಮತ್ತು ಫಾರಂ ನಂ. 19 ಗಳ ರೂಪದಲ್ಲಿ ಅಮಾಯಕ ಜನರಿಗೆ ಮಾರಿ ಅವರನ್ನು ಮೋಸಗೊಳಿಸಿದ ಹಾಗೆ ಇಂತಹ ನೋಂದಣಿಗಳನ್ನು ಮಾಡಬಾರದೆಂದು ಆರ್‌ಡಿ 80 ಇ.ಎಸ್‌ಎಂ 93(ಪಿ) ದಿನಾಂಕ 23.3.96ರ ಪ್ರಕಾರ ಒಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಬೆಂಗಳೂರು ನಗರ ಜಿಲ್ಲಾಧಿಕಾರಿಗಳು 250.31 ಎಕರೆ ವಿಸ್ತೀರ್ಣದ ಸರ್ಕಾರಿ ಜಮೀನುಗಳನ್ನು ಗುರುತಿಸಿದ್ದು, ಈ ಜಮೀನುಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಮಾರುಕಟ್ಟೆ ಬೆಲೆಯಲ್ಲಿ ಕೊಳ್ಳುವರೇ ಎಂದು ಚರ್ಚೆ ನಡೆಯಲಾಗುತ್ತಿದ್ದು, ಒಂದು ವೇಳೆ ಅವರು ಮಾರುಕಟ್ಟೆ ಬೆಲೆಯಲ್ಲಿ ಕೊಳ್ಳಲು ತಯಾರಿಲ್ಲದಿದ್ದಲ್ಲಿ ಇವುಗಳನ್ನು ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ನಾನು ಸ್ವತಃ ಆವಲಹಳ್ಳಿ ಗ್ರಾಮ ಲೆಕ್ಕಿಗರ ಕಛೇರಿಗೆ ಭೇಟಿ ನೀಡಿ ಅಲ್ಲಿ ಆಗುತ್ತಿರುವ ಅವ್ಯವಹಾರಗಳನ್ನು ಗಮನಿಸಿ ಆ ಗ್ರಾಮ ಲೆಕ್ಕಿಗರ ದಿನಾಂಕ 22.2.97 ರಂದು ನಿಲಂಬನೆಯಲ್ಲಿರಿಸಿದ್ದು ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜಸ್ವ ನಿರೀಕ್ಷಕರು, ರಾಮಚಂದ್ರಪುರ ವೃತ್ತ ಯಲಹಂಕ ಹೋಬಳಿ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು ಇವರು ರಾಮಚಂದ್ರಪುರ ವೃತ್ತಕ್ಕೆ ಸೇರಿದ ಸಿಂಗಾಪುರದ ಗ್ರಾಮದ ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ನಿರ್ಮಾಣ ಗ್ರಾಮದಲ್ಲಿ ಭೂ ಪರಿವರ್ತನೆ ಆಗದೇ ಅಕ್ರಮ ಬಡಾವಣೆಗಳು ನಿರ್ಮಾಣವಾಗುತ್ತಿದ್ದರೂ ತಡೆಗಟ್ಟದೆ ಮತ್ತು ಮೇಡಿ ಅಗ್ರಹಾರ ಗ್ರಾಮದ ಸ.ನಂ. 24 ಸರ್ಕಾರಿ ಜಮೀನು ಆಗಿದ್ದರೂ, ಜೆ.ಪಿ.ಎ. ಮೇಲೆ ಮಾರಾಟ ಮಾಡುತ್ತಿದ್ದರೂ ಪರಿಶೀಲಿಸದೆ ಇವರ ವೃತ್ತದ

ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಲ್ಲಿ ಸರ್ಕಾರಿ ಜಮೀನುಗಳನ್ನು ರಕ್ಷಿಸಲು ಮತ್ತು ಅನಧಿಕೃತ ಬಡಾವಣೆಗಳನ್ನು ತಡೆಯಲು ವಿಫಲರಾಗಿದ್ದು, ಈ ರೀತಿ ಸರ್ಕಾರಿ ಕೆಲಸದಲ್ಲಿ ಆಶ್ರದ್ಧೆ ತೋರಿಸಿ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತ ಕಟ್ಟಡಗಳು ಬರಲು ಕಾರಣರಾಗಿದ್ದು, ಇದು ಇವರ ಕರ್ತವ್ಯಚ್ಯುತಿ ಮತ್ತು ಗುರುತರವಾದ ಅಪರಾಧ ಮೇಲ್ನೋಟಕ್ಕೆ ದೃಡಪಡುವುದರಿಂದ ಇವರನ್ನು · ದಿನಾಂಕ 23.12.96 ರಂದು ಅಮಾನತ್ತಿನಲ್ಲಿಡಲಾಗಿದೆ.

ಬೆಂಗಳೂರು ನಗರ ಮತ್ತು ಗ್ರಾಮಾಂತರ ಭೂಕಬಳಿಕೆದಾರರು ಹಲವಾರು ರೀತಿಗಳಿಂದ ಕಾನೂನಿನ ಚೌಕಟ್ಟಿನೊಳಗೆ ಮತ್ತು ಈ ಚೌಕಟ್ಟಿನಿಂದ ಹೊರಗೂ ತಮ್ಮ ಸ್ವಾರ್ಥ ಸಾಧನೆಗಾಗಿ ಬೆಲೆ ಬಾಳುವ ಜಮೀನುಗಳನ್ನು ತಮ್ಮ ವಶಕ್ಕೆ ಪಡೆದುಕೊಂಡು ಅವುಗಳನ್ನು ಅಮಾಯಕರಿಗೆ ಮಾರಿ ಹಣ ಸಂಪಾದಿಸುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದ್ದು ಈ ವ್ಯವಹಾರಗಳಲ್ಲಿ ಕೆಲವು ಸರ್ಕಾರಿ ನೌಕರರುಗಳು ಶಾಮೀಲಾಗಿರುವಂತಹದ್ದು ಸಹ ಸರ್ಕಾರ ಗಮನಿಸಿದ್ದು ಅಂತಹವರ ಮೇಲೆ ತೀವ್ರವಾದ ಕ್ರಮವನ್ನು ನಿರ್ಧಾಕ್ಷಿಣ್ಯವಾಗಿ ಕೈಗೊಳ್ಳಲಾಗುತ್ತಿದೆ ಹಾಗೂ ಇಂತಹ ಪ್ರಕರಣಗಳು ಬರದಂತೆ ಎಚ್ಚರ ವಹಿಸಲು ಉಪವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರುಗಳಿಗೂ ವೈಯಕ್ತಿಕವಾಗಿ ಜವಾಬ್ದಾರಿ ನಿಗಧಿಪಡಿಸಲಾಗಿದೆ. ತಪ್ಪಿತಸ್ಥ ನೌಕರರಾಗಲೀ ಅಥವಾ ಸಾರ್ವಜನಿಕರಾಗಲೀ ಅವರ ಮೇಲೆ ನಿರ್ಧಾಕ್ಷಿಣ್ಯವಾಗಿ ಕಾನೂನು ಕ್ರಮ ಕ್ರಿಮಿನಲ್ ಮೊಕದ್ದಮೆಗಳನ್ನೊಳಗೊಂಡಂತೆ ಜರುಗಿಸ ಲಾಗುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರ ಹೇಳಿಕೆಯಲ್ಲಿ ಬಿಟ್ಟು ಹೋಗಿರತಕ್ಕ ಒಂದೇ ಒಂದು ವಿಷಯದ ಬಗ್ಗೆ ನಾನು ಸ್ಪಷ್ಟೀಕರಣ ಕೇಳಬಯಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ವಿವರವಾದ ಉತ್ತರ ಕೊಟ್ಟಿದ್ದಾರೆ. ಈಗಾಗಲೇ ಸಮಯವಾಗಿದೆ. ಇದರ ಬಗ್ಗೆ ಹೆಚ್ಚಿನ ಚರ್ಚೆ ಬೇಡ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ನಾನು ಈ ಬಗ್ಗೆ ಒಂದೇ ಒಂದು ಸ್ಪಷ್ಟೀಕರಣ ಕೇಳುತ್ತೇನೆ, ನಾನು ನಿನ್ನೆ ಈ ವಿಷಯವನ್ನು ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ, ಯಾರು ಅಕ್ರಮ ಕಟ್ಟಡಗಳನ್ನು ಈಗಾಗಲೇ ಕಟ್ಟಿಸಿ ಕೊಂಡಿದ್ದಾರೋ ಆ ಕಟ್ಟಡಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕು ಅದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದ್ದೆ. ಅದರ ಬಗ್ಗೆ ಈಗ ಮಾನ್ಯ ಸಚಿವರು ನೀಡಿದ ಹೇಳಿಕೆಯಲ್ಲಿ ಯಾವುದೇ ಪ್ರಸ್ತಾಪ ಇಲ್ಲ. ಅದನ್ನು ನಾನು ಮಾನ್ಯ ಮಂತ್ರಿಗಳಿಗೆ ಕೇಳುತ್ತಿದ್ದೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಉಪಾಧ್ಯಕ್ಷರೇ, ಸರ್ಕಾರದಲ್ಲಿ ಒಂದು ಕಾನೂನನ್ನು ಮಾಡಿದೆ. ಹಿಂದಿನ ಸರ್ಕಾರದಲ್ಲಿ ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ಇರತಕ್ಕಂತಹ, ರೆವಿನ್ಯೂ ಲ್ಯಾಂಡ್‌ನಲ್ಲಿ ಯಾರಾದರೂ ಒಬ್ಬ ವ್ಯಕ್ತಿ ಮನೆ ಕಟ್ಟಿದ್ದರೆ ಅಂತಹವರಿಗೆ ನಾವು ರೆಗ್ಯೂಲರೈಸ ಮಾಡುತ್ತೇವೆ ಎಂದು ಒಂದು ಕಡೆ ಹೇಳಿದ್ದರು. ಅದರ ಪ್ರಕಾರ ಸುಮಾರು 77 ಸಾವಿರ ಅರ್ಜಿಗಳು

ಬೆಂಗಳೂರು ನಗರದಲ್ಲಿ ಅದಕ್ಕಾಗಿ ರಚಿಸಲಾದ ಕಮಿಟಿಯ ಮುಂದೆ ಪೆಂಡಿಂಗ್ ಇವೆ. ಆ ಕಮಿಟಿ ಏ ನಿರ್ಣಯ ಮಾಡುತ್ತದೆಯೋ ಅದರನ್ವಯ ಅರ್ಜಿಗಳ ವಿಲೇವಾರಿಯಾಗುತ್ತದೆ. ಆ ಬಗ್ಗೆ ಕಮಿಟ ಅಧಿಕಾರ ಕೊಟ್ಟಿದೆ. ಅದರ ಪ್ರಕಾರ ಅರ್ಜಿ ವಿಲೇವಾರಿ ನಡೆಯುತ್ತದೆ. ಒಂದು ವೇಳೆ ಆ ಕಾನೂ ಇಲ್ಲದಿದ್ದರೆ ಸರ್ಕಾರಿ ಜಮೀನಿನಲ್ಲಿ ಯಾರು ಮನೆಗಳನ್ನು ಕಟ್ಟಿಸಿದ್ದರೋ ಅವುಗಳನ್ನೆಲ್ಲಾ ಮುಟ್ಟುಗೋ ಹಾಕಿಕೊಳ್ಳುತ್ತಿದ್ದೆವು. ಅದಕ್ಕೆ ನಾವು ಒಂದು ಡೇಟ್ ಫಿಕ್ಸ್ ಮಾಡಿದ್ದೆವು. ಇಂತಿಷ್ಟು ತಾರೀಖಿ ಒಳಗೊಳಗಾಗಿ ಯಾರಾದರೂ ಅರ್ಜಿಗಳನ್ನು ಹಾಕದಿದ್ದಲ್ಲಿ, ಆ ತಾರೀಖಿನ ನಂತರ ಯಾರಾದರ ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ಮನೆಗಳನ್ನು ಕಟ್ಟಿದ್ದರೆ ಅವುಗಳನ್ನೆಲ್ಲಾ ಮುಟ್ಟುಗೋಲು ಹಾ ನಾವು ಸರ್ಕಾರಕ್ಕೆ ತೆಗೆದುಕೊಳ್ಳುತ್ತೇವೆ. ಅವರು ಎಷ್ಟೇ ದೊಡ್ಡವರಾಗಿದ್ದರೂ ನಾನು ಅವರ ಮೇ ಕ್ರಮ ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು : ಈಗ ಮಾನ್ಯ ಬಚ್ಚೇಗೌಡರು ಮಾನ್ಯ ವಾಟಾಳ್ ನಾಗರಾಜ್‌ರವರ ಪ್ರಸ್ತಾಪಿಸಿದ್ದ ವಿಷಯವೊಂದಕ್ಕೆ ಸಂಬಂಧಿಸಿದಂತೆ ಒಂದು ಹೇಳಿಕೆಯನ್ನು ನೀಡುತ್ತಾರೆ.

ಚಾಮರಾಜನಗರದ ಕುಡಿಯುವ ನೀರಿನ ಯೋಜನೆಗೆ ಹೆಚ್ಚಿನ ಹಣ ನೀಡುವುದರ ಬ

+ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಮಾ ಹಿರಿಯ ಸದಸ್ಯರಾದ ವಾಟಾಳ ನಾಗರಾಜರವರು ಇವತ್ತು ಈ ಚಾಮರಾಜನಗರ ಕುಡಿಯುವ ನೀರಿ ಬಗ್ಗೆ ಹೆಚ್ಚುವರಿ ಹಣವನ್ನು ಕೊಡುವ ಬಗ್ಗೆ ಈಗಾಗಲೇ ಸರ್ಕಾರವನ್ನು ಕೇಳಿದ್ದಾರೆ. ಇದರ ಬ ರಾಜ್ಯದಲ್ಲಿ 1990ರಲ್ಲಿ ಸುಮಾರು 16 ನೀರು ಸರಬರಾಜು ಯೋಜನೆಗಳಿಗೆ ಹೆಚ್ಚುವರಿ ಹಣವನ್ನು ಕೊಳವೆಗಳನ್ನು ಅಳವಡಿಸಲು ಪೈಪ್‌ಲೈನ್ ಹಾಕುವುದಕ್ಕೆ ಟೆಂಡರ್‌ಗಳನ್ನು ಕರೆದು ಆ ಟೆಂಡರ ಮೂಲಕ ಏಜೆನ್ಸೀಗಳನ್ನು ಮಾಡಿ ಆ ಕಾರ್ಯವನ್ನು ಒಪ್ಪಿಸಲಾಗಿತ್ತು. ಅದರಲ್ಲಿ ತಡ ಆಗಿದ್ದರಿಂದ ಮತ ನಾನಾ ಕಾರಣಗಳಿಂದ ಆ ಕಂಟ್ರಾಕ್ಟರ್‌ಗಳು ಹೆಚ್ಚು ಹಣವನ್ನು ಕೊಡಬೇಕು, ಎಸ್ಕಲೇಷನ್ ಪ್ರೈಸ್ ಎಂದಿದ್ದರಿಂದ, ಈಗ ಮುಖ್ಯಮಂತ್ರಿಗಳಾಗಿರುವವರು ಆಗ ಉಪ ಮುಖ್ಯಮಂತ್ರಿಗಳಾಗಿದ್ದಾ ಚಿಕ್ಕಣ್ಣಯ್ಯಪ್ಪನವರ ಒಂದು ಸಮಿತಿಯನ್ನು ನೇಮಕ ಮಾಡಿದಾಗ, ಈ ಎಲ್ಲಾ ಯೋಜನೆಗಳಿಗೆ ಒಂದ ಸಾರಿ, ಒಂದು ಟೈಮ್ ಎಸ್ಕಲೇಷನ್ ಕೇಳಿದ್ದಾರೆ, ಆದ್ದರಿಂದ ಕೊಡಬೇಕು, ಇಲ್ಲದಿದ್ದರೆ ಕೆಲ ಸ್ಥಗಿತವಾಗುತ್ತದೆ ಅಥವಾ ತಡವಾಗುತ್ತದೆ ಎನ್ನುವ ದೃಷ್ಟಿಯಿಂದ ಅವರು ಒಂದು ರಿಪೋರ್ಟ್ ಅನ ಕೊಟ್ಟರು. ಈಗಾಗಲೇ ಅದರ ಬಗ್ಗೆ ಸಾಕಷ್ಟು ಮಾನ್ಯ ವಾಟಾಳ್ ನಾಗರಾಜ್‌ರವರು ಈ ಸದನದಲ ಪ್ರಸ್ತಾಪ ಮಾಡಿದರು ಮತ್ತು ಇತರ ಶಾಸಕರು ಅವರವರ ಕ್ಷೇತ್ರಗಳಲ್ಲಿ ಕೆಲಸ ತಡವಾಗುತ್ತಿದೆ ವಿಳಂಬವಾಗಿದೆ, ಕಂಟ್ರಾಕ್ಟರ್ಸ್ ಪೈಪ್‌ಲೈನ್ ಕೆಲಸ ಮಾಡುತ್ತಿಲ್ಲ ಎಂದು ತಿಳಿಸಿದ್ದರ ಮೇರೆಗೆ, ಮು ವಿಶೇಷವಾಗಿ 2-3 ಮೀಟಿಂಗ್‌ಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕರೆದು, ಅದರ ಬಗ್ಗೆ ಮೊನ್ನೆ ತಾನೆ ಸಚಿವ ಸಂಪುಟದ ತೀರ್ಮಾನ ಆಗಿ ರಾಜ್ಯದಲ್ಲಿ 11 ಕುಡಿಯುವ ನೀರಿನ ಯೋಜನೆಗಳಿಗೆ ಒಂದ ಸಾರಿ, ಹೆಚ್ಚುವರಿ ಹಣ, ಎಸ್ಕಲೇಷನ್ ಅನ್ನು ಕಂಟ್ರಾಕ್ಟರ್‌ಗಳಿಗೆ ಕೊಡಬೇಕು ಎಂದು ತಿಳಿಸಿ, 1 ತಿಂಗಳುಗಳಲ್ಲಿ ಆ ಕೆಲಸಗಳನ್ನು ಆದಷ್ಟು ಬೇಗನೆ ಮುಗಿಸಿಕೊಡಬೇಕು ಎಂಬ ಕಂಡೀಷನ್ ಹಾಕಿ ಮತ್ತು ಟಾರ್ಗೆಟ್ ಇಟ್ಟು ಈ ಕೆಲಸ ಕಾರ್ಯಗಳನ್ನು ಮುಗಿಸಬೇಕು ಎನ್ನುವ ದೃಷ್ಟಿಯಿಂದ 532.9